# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ : 226
2. ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸಬೇಕಾದ ದಿನಾಂಕ : 14.09.2022.
4. ಉತ್ತರಿಸುವ ಸಚಿವರು : ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಜಿಲ್ಲೆಯಲ್ಲಿ ವಿಮಾನ ನಿಲ್ದಾಣದ ಕಾಮಗಾರಿಯು ಯಾವ ಹಂತದಲ್ಲಿದೆ; | ವಿಜಯಪುರ ವಿಮಾನ ನಿಲ್ದಾಣದ ಪ್ಯಾಕೇಜ್ – 1ರ ಕಾಮಗಾರಿಗಳು (ರನ್‌ವೇ, ಟ್ಯಾಕ್ಸಿವೇ, ಏಪ್ರಾನ್, ಐಸೋಲೇಶನ್ ಬೇ, ಕೂಡು ರಸ್ತೆ ಹಾಗೂ ಒಳ ರಸ್ತೆಗಳು) ಫೆಬ್ರುವರಿ, 2021 ರಿಂದ ಪ್ರಗತಿಯಲ್ಲಿದ್ದು, ಶೇಕಡ 66ರಷ್ಟು ಪೂರ್ಣಗೊಂಡಿರುತ್ತದೆ. ಪ್ಯಾಕೇಜ್-2ರ ಕಾಮಗಾರಿಗಳು (ಪ್ಯಾಸೆಂಜರ್ ಟರ್ಮಿನಲ್ ಕಟ್ಟಡ, ಎ.ಟಿ.ಸಿ ಕಟ್ಟಡ, ವಿದ್ಯುತ್ ಉಪ ಕೇಂದ್ರ, ವಾಚ್ ಟವರ್ ಇತ್ಯಾದಿ) ಏಪ್ರಿಲ್-2022 ರಿಂದ ಪ್ರಗತಿಯಲ್ಲಿದ್ದು, ಶೇಕಡ 17ರಷ್ಟು ಪೂರ್ಣಗೊಂಡಿರುತ್ತದೆ. |
| ಆ) | ಈ ಕಾಮಗಾರಿಗೆ ಬೇಕಾಗುವಷ್ಟು ಸ್ಥಳವನ್ನು ಪಡೆಯಲಾಗಿದೆಯೇ; ಹಾಗೂ ಇದಕ್ಕೆ ನೀಡಲಾಗಿರುವ ಪರಿಹಾರ ಧನವೆಷ್ಟು; | ವಿಜಯಪುರ ವಿಮಾನ ನಿಲ್ದಾಣ ಯೋಜನೆಗಾಗಿ ವಿಜಯಪುರ ಜಿಲ್ಲೆ ಮತ್ತು ತಾಲ್ಲೂಕು, ಅಲಿಯಾಬಾದ್, ಬುರಣಾಪುರ ಮತ್ತು ಮದಬಾವಿ ಗ್ರಾಮಗಳಲ್ಲಿನ ಒಟ್ಟು 727-01 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದ್ದು, ಭೂಸ್ವಾಧೀನಕ್ಕಾಗಿ ರೂ. 63.46 ಕೋಟಿ ವ್ಯಯಿಸಲಾಗಿದೆ. |
| ಇ) | ಎಂದಿನಿಂದ ವಿಮಾನಯಾನ ಆರಂಭಿಸಲು ಉದ್ದೇಶಿಸಲಾಗಿದೆ? (ವಿವರ ನೀಡುವುದು) | ವಿಜಯಪುರ ವಿಮಾನ ನಿಲ್ದಾಣದಿಂದ ಜುಲೈ 2023ರಲ್ಲಿ ವಿಮಾನಯಾನ ಆರಂಭಿಸಲು ಉದ್ದೇಶಿಸಲಾಗಿದೆ. |

ಸಂಖ್ಯೆ:ಮೂಅಇ 142 ರಾಅವಿ 2022

(ವಿ. ಸೋಮಣ್ಣ)
ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ,
ಸಚಿವರು